"ಮಧುರ ಮಕ್ಕಳೇ - ನೆನಪಿನ ಯಾತ್ರೆಯಲ್ಲಿ ಸಮಯವನ್ನು ಕೊಡುತ್ತಾ ಹೋದ ಹಾಗೆ ನಿಮ್ಮ ವಿಕರ್ಮ ವಿನಾಶವಾಗುತ್ತಾಹೋಗುತ್ತದೆ, ಎಲ್ಲದರಿಂದ ಮಮತ್ವವು ದೂರವಾಗುತ್ತದೆ, ತಂದೆಯ ಕೊರಳಿನ ಹಾರವಾಗುವಿರಿ"

ಪ್ರಶ್ನೆ: ಗಾಡ್ಫಾದರ್ನ ಮುಖಾಂತರ ನೀವು ಮಕ್ಕಳು ಯಾವ ಎರಡು ಶಬ್ಧಗಳ ವಿದ್ಯೆಯನ್ನು ಓದುತ್ತೀರಿ? ಆ ಎರಡು ಶಬ್ದಗಳಲ್ಲಿ ಯಾವ ರಹಸ್ಯ ಸಮಾವೇಶವಾಗಿದೆ?

ಉತ್ತರ: ಗಾಡ್ಫಾದರ್ ನಿಮಗೆ ಇಷ್ಟನ್ನು ಓದಿಸುತ್ತಾರೆ - ಹೇ ಆತ್ಮಗಳೇ ದೇಹದ ಭಾನವನ್ನು ಬಿಡಿ ಮತ್ತು ನನ್ನೊಬ್ಬನನ್ನೇ ನೆನಪು ಮಾಡಿ ಈ ಎರಡೂ ಶಬ್ದಗಳ ವಿದ್ಯೆಯನ್ನು ಈ ಕಾರಣದಿಂದ ಓದಿಸಲಾಗುತ್ತದೆ ಏಕೆಂದರೆ ಈಗ ನೀವು ಈ ಹಳೆಯ ಪ್ರಪಂಚದಲ್ಲಿ ಹಳೆಯ ಶರೀರವನ್ನು ತೆಗೆದುಕೊಳ್ಳಬಾರದು. ನೀವು ಹೊಸ ಪ್ರಪಂಚಕ್ಕೆ ಹೋಗಬೇಕು ನಾನು ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಬಂದಿದ್ದೇನೆ ಆದ್ದರಿಂದ ದೇಹಸಹಿತ ಎಲ್ಲವನ್ನೂ ಮರೆಯುತ್ತಾಹೋಗಿ.

ಗೀತೆ: ನೀವೇ ತಂದೆ-ತಾಯಿಯಾಗಿದ್ದೀರಿ.........................

ಓಂ ಶಾಂತಿ. ಸಾಲಿಗ್ರಾಮ ಮಕ್ಕಳು ತಿಳಿದುಕೊಂಡಿದ್ದೀರಿ- ಯಾವುದೇ ಮನುಷ್ಯರ ಮುಖಾಂತರ ಯಾವುದೇ ಶಾಸ್ತ್ರಗಳನ್ನು ಕೇಳುತ್ತಿಲ್ಲ ಇದಕ್ಕೆ ಸತ್ಸಂಗವೆಂದು ಹೇಳಲಾಗುವುದಿಲ್ಲ ವಿದ್ಯೆ ಎಂದು ಹೇಳಲಾಗುತ್ತದೆ. ಒಂದುವೇಳೆ ಮನುಷ್ಯರನ್ನು ಕೇಳಿದಾಗ ನಾವು ಸತ್ಸಂಗಕ್ಕೆ ಹೊಗುತ್ತೇವೆ ಅಥವಾ ನಾವು ಕಾಲೇಜಿಗೆ ಹೊಗುತ್ತೇವೆ ಎಂದು ಹೇಳುತ್ತಾರೆ. ಸತ್ಸಂಗದಲ್ಲಿ ಸಾಧು, ಸಂತ, ವಿಧ್ವಾನರು ಮುಂತಾದವರು ತಿಳಿಸುತ್ತಾರೆಂದು ನಿಮಗೆ ತಿಳಿದಿದೆ. ಶಾಲೆಯಲ್ಲಿ ಮನುಷ್ಯರೇ ಶಿಕ್ಷಕ, ಪ್ರೋಫೆಸರ್ ಮುಂತಾದವರಾಗುತ್ತಾರೆ ಆದರೆ ಇಲ್ಲಿ ಮನುಷ್ಯರಿಲ್ಲ. ಇವರು ಬೇಹದ್ದಿನ ಆತ್ಮೀಯ ತಂದೆಯಾಗಿದ್ದಾರೆ ಇವರಿಗೆ ತ್ವಮೇವ ಮಾತಾಶ್ಚ ಪಿತಾ.....ಎಂದು ಹೇಳಲಾಗುತ್ತದೆ. ಈ ಮಹಿಮೆಯನ್ನು ದೇವತೆಗಳಿಗೂ ಹೇಳಲಾಗುವುದಿಲ್ಲ, ಬ್ರಹ್ಮಾ-ವಿಷ್ಣು-ಶಂಕರರಿಗೂ ಹೇಳಲಾಗುವುದಿಲ್ಲ, ಈ ಮಹಿಮೆಯನ್ನು ನಿರಾಕಾರ ಪರಮಪಿತ ಪರಮಾತ್ಮ ಈ (ಬ್ರಹ್ಮಾ) ಶರೀರವನ್ನು ಧಾರಣೆ ಮಾಡಿ ಪಾತ್ರವನ್ನಭಿಯಿಸುತ್ತಿದ್ದಾರೆ. ಈ ನಿರಾಕಾರ ಪರಮಪಿತ ಪರಮಾತ್ಮ ಇಲ್ಲದಿದ್ದರೆ ಯಾರೂ ಸಹ ಬ್ರಹ್ಮಾಕುಮಾರ-ಕುಮಾರಿಯರಿಗೆ ವಿದ್ಯೆಯನ್ನು ಓದಿಸಲು ಸಾಧ್ಯವಿಲ್ಲ. ಬ್ರಹ್ಮನಿಗೆ ಜ್ಞಾನಸಾಗರ ಎಂದು ಹೇಳುವುದಿಲ್ಲ. ಅವರಿಗೆ ಪ್ರಜಾಪಿತನೆಂದು ಹೇಳಲಾಗುತ್ತದೆ. ಜ್ಞಾನಸಾಗರನೊಬ್ಬರಿಗೆ ನಿರಾಕಾರ ಪರಮಪಿತ ಪರಮಾತ್ಮನೆಂದು ಹೇಳಲಾಗುತ್ತದೆ, ಅವರೇ ಪತಿತರಿಂದ ಪಾವನ ಮಾಡುತ್ತಾರೆ ಏಕೆಂದರೆ ಜ್ಞಾನದಾತನಿಂದಲೇ ಸದ್ಗತಿಯಾಗುತ್ತದೆ. ಇದು ಹೊಸ ಮಾತಾಗಿದೆಯಲ್ಲವೆ. ಗೀತೆಯಲ್ಲಿ ಕೃಷ್ಣನ ಹೆಸರನ್ನು ಹಾಕುವುದರಿಂದ ಖಂಡನೆಯಾಗಿದೆ. ಈಗ ಜ್ಞಾನಸಾಗರ ಪರಮಪಿತ ಪರಮಾತ್ಮನೇ ಬಂದು ಜ್ಞಾನವನ್ನು ಕೊಡುತ್ತಿದ್ದಾರೆಂದು ಮನುಷ್ಯರಿಗೆ ಹೇಗೆ ತಿಳಿಯುತ್ತದೆ ಆದರೆ ಮನುಷ್ಯರು ಮರೆತುಹೋಗುತ್ತಾರೆ. ಶಾಸ್ತ್ರ ಮುಂತಾದವು ದ್ವಾಪರದ ಆದಿಯಿಂದ ಆಯಿತು ಎಂದಲ್ಲ. ಮೊದಲು ತಂದೆಯ ಚಿತ್ರವನ್ನು ಮಾಡಿ ಮಂದಿರವನ್ನು ಕಟ್ಟುತ್ತಾರೆ ಆದ್ದರಿಂದಲೇ ಭಕ್ತಿಯು ಪ್ರಾರಂಭವಾಗುತ್ತದೆ. ಭಕ್ತರೂ ಸಹ ಬಹಳ ಸಮಯ ಪರಮಾತ್ಮನ ಮಕ್ಕಳಾಗಿರಬೇಕು ಏಕೆಂದರೆ ಶ್ರೇಷ್ಠಾತಿ ಶ್ರೇಷ್ಠ ಅವರಾಗಿದ್ದಾರೆ, ಅವರ ಪೂಜೆಯೇ ಮೊದಲು ಪ್ರಾರಂಭವಾಗುತ್ತದೆ. ಪೂಜೆಗೆ ಯೋಗ್ಯರಾಗುವಂತಹವರು ಒಬ್ಬರೇ ತಂದೆಯಾಗಿದ್ದಾರೇ. ಬ್ರಹ್ಮಾ-ವಿಷ್ಣು-ಶಂಕರ ಹಾಗೂ ಜಗದಂಬ, ಜಗತಪಿತ ಪೂಜೆಗೆ ಯೋಗ್ಯರಾಗಿಲ್ಲ. ಅವರನ್ನು ಪೂಜ್ಯರನ್ನಾಗಿ ಮಾಡುವಂತಹವರು ಒಬ್ಬರೇ ತಂದೆಯಾಗಿದ್ದಾರೆ. ಅವರ ಭಕ್ತಿಯೂ ಅವಶ್ಯಕವಾಗಿ ಹೆಚ್ಚಾಗಿ ಆಗುತ್ತದೆ. ಈ ಬ್ರಹ್ಮ ಏನು ಸಹ ಇಲ್ಲ. ಇವರಲ್ಲಿ ಪರಮಪಿತ ಪರಮಾತ್ಮ ಇದ್ದಾಗ ಇವರ ಪೂಜೆಯೂ ಆಗುತ್ತಿರುತ್ತದೆಯಲ್ಲವೇ? ಎಲ್ಲರ ಸದ್ಗತಿದಾತ ಒಬ್ಬರೇ ತಂದೆಯಾಗಿದ್ದಾರೆ ಆದ್ದರಿಂದ ವಿಚಾರಸಾಗರ ಮಂಥನ ಮಾಡಬೇಕು. ಭಕ್ತಿಯೂ ಹೇಗೆ ಪ್ರಾರಂಭವಾಗುತ್ತದೆ? ಶಿವತಂದೆ ವಿಚಾರಸಾಗರ ಮಂಥನ ಮಾಡುವುದಿಲ್ಲ. ನಾವು ಮಕ್ಕಳೇ ವಿಚಾರ ಸಾಗರ ಮಂಥನ ಮಾಡಬೇಕು. ಸರಸ್ವತಿಯೂ ಬ್ರಹ್ಮನ ಮುಖಾವಂಶವಳಿಯಾಗಿದ್ದಾರೆ ಅವರೂ ಸಹ ವಿಚಾರ ಸಾಗರ ಮಂಥನ ಮಾಡಬೇಕು. ಸರ್ವಶ್ರೇಷ್ಠವಾಗಿರುವವರೂ ಒಬ್ಬರೇ ಆಗಿದ್ದಾರೆ. ಒಂದುವೇಳೆ ಬಂದಿಲ್ಲದಿದ್ದರೆ ಪ್ರಪಂಚವನ್ನು ಪತಿತರಿಂದ ಪಾವನ ಯಾರು ಮಾಡುತ್ತಾರೆ? ಎಲ್ಲಾ ಮನುಷ್ಯ ಮಾತ್ರರು ಪತಿತರಾಗಿದ್ದಾರೆ. ಈಗ ಶಿವತಂದೆಯೂ ಬರದಿದ್ದರೆ ಸ್ವರ್ಗದ ಆಸ್ತಿಯನ್ನು ಯಾರು ಕೊಡುತ್ತಾರೆ? ನಿಶ್ಚಯ ಬುದ್ಧಿಯಿಲ್ಲದೆ ಇದ್ದರೆ ವಿಜಯಮಾಲೆಯಲ್ಲಿ ಮಣಿಯಾಗಲೂ ಸಾಧ್ಯವಿಲ್ಲ. ಸುಪುತ್ರ ಮಕ್ಕಳು ಸದಾ ಕೊರಳಿನ ಮಾಲೆಯಾಗಿರುತ್ತಾರೆ. ಈ ಮಗು ಬಹಳ ಸುಪುತ್ರ ಆಜ್ಞಾಕಾರಿಯಾಗಿದ್ದರೆ ತಂದೆಯೂ ಖುಷಿ ಪಡುತ್ತಾರೆ. ಅನೇಕ ತಂದೆ-ತಾಯಿಗಳಿಗೆ 12-14 ಮಕ್ಕಳೂ ಇರುತ್ತಾರೆ. ಅವರಲ್ಲಿ ಕೆಲವರು ಕುಪುತ್ರರು ಕೆಲವರು ಸುಪುತ್ರರು ಆಗಿರುತ್ತಾರೆ. ಪತಿತ ಪಾವನ ತಂದೆಯನ್ನು ಬಿಟ್ಟರೆ ಪತಿತರನ್ನು ಉದ್ಧಾರ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಗಂಗಾ ನದಿಯ ಮೇಲೆ ಗಂಗೆಯ ಮಂದಿರವಿದೆ ಎಂದು ನಿಮಗೆ ತಿಳಿದಿದೆ ಅಂದಾಗ ಈ ಗಂಗೆಯೂ ಯಾರೆಂದು ತಿಳಿದುಕೊಳ್ಳಬೇಕು. ಇವರು ಯಾವುದಾದರು ಶಕ್ತಿಯಾಗಿದ್ದಾರೆ, ಅವರಿಂದ ಯಾರಾದರು ಪತಿತರಿಂದ ಪಾವನರಾಗುತ್ತಾರೆ ಹಾಗೂ ನೀರಿನಿಂದ ಪಾವನರಾಗುತ್ತಾರೆಯೇ?

ತಂದೆ ಹೇಳುತ್ತಾರೆ- ಗಂಗೆ ಪತಿತ ಪಾವನಿಯಲ್ಲ, ಯೋಗದವಿನಃ ಯಾರೂ ಪಾವನರಾಗಲೂ ಸಾಧ್ಯವಿಲ್ಲ, ಆದ್ದರಿಂದ ನೀವು ಯಾವುದೇ ಗಂಗಾ ಸ್ನಾನವನ್ನು ಮಾಡುವ ಅಗತ್ಯವಿಲ್ಲಾ. ಯೋಗ ಅರ್ಥಾತ್ ನೆನಪು. ಬುದ್ಧಿಯೋಗವನ್ನು ಜೋಡಿಸಬೇಕು. ಅವರು ಬಹಳ ಯೋಗಾಸನ ಮುಂತಾದುವುಗಳನ್ನು ಹಾಕುತ್ತಾರೆ, ಅನೇಕ ಪ್ರಕಾರದ ಹಠಯೋಗವನ್ನು ಮಾಡುತ್ತಾರೆ ಅದಕ್ಕೆ ಯೋಗವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಮಾತೆಯರು, ಅಬಲೆಯರು ಹಠಯೋಗವನ್ನು ಹೇಗೆ ತಿಳಿದುಕೊಳ್ಳುತ್ತಾರೆ?

ಮನುಷ್ಯರು ಶಾಲೆಯಲ್ಲಿ ವಿದ್ಯೆಯನ್ನು ಓದುತ್ತಾರೆ ಅದರಲ್ಲಿ ಮೋಸ ಹೋಗುವಂತಹ ಮಾತಿರುವುದಿಲ್ಲ. ಒಂದಲ್ಲ ಒಂದು ಪರೀಕ್ಷೆಯನ್ನು ಪಾಸ್ ಮಾಡುತ್ತಾರೆ. ಅವರಿಗೆ ಈ ಪರೀಕ್ಷೆಯನ್ನು ತೇರ್ಗಡೆಹೊಂದಿ ನಾನು ಈ ರೀತಿಯಾಗುತ್ತೇನೆಂದು ತಿಳಿಯುತ್ತಾರೆ. ಇಲ್ಲೂ ಸಹ ಪರೀಕ್ಷೆಯಾಗಿದೆ, ಭಗವಂತನ ವಿದ್ಯೆಯಾಗಿದೆ ನಿಮಗೆ ತಿಳಿದಿದೆ. ಅವರು ಪತಿತ-ಪಾವನರಾಗಿದ್ದಾರೆ. ನಿಮ್ಮದು ಗಾಡ್ ಫಾದರ್ಲಿ ಸ್ಟೂಡೆಂಟ್ ಲೈಫ್ ಆಗಿದೆ. ತಂದೆಯೂ ಪತಿತರಿಂದ ಪಾವನ ಹೇಗೆ ಮಾಡುತ್ತಾರೆ? ಹೇ- ಆತ್ಮಗಳೇ, ಈ ಶರೀರದಬಾನವನ್ನು ಬಿಡಿ ಎಂದು ಹೇಳುತ್ತಾರೆ. ಹಳೆಯ ಶರೀರವನ್ನು ಬಿಡಬೇಕು. ಮೊದಲು-ಮೊದಲು ನಿಮ್ಮ ಶರೀರ ಸುಂದರವಾಗಿತ್ತು ಆದರೆ ಈಗ ನಿಮ್ಮದು ಕಬ್ಬಿಣಯುಗದ್ದಾಗಿದೆ. ಈಗ ನೀವು ಹೊಸ ಶರೀರವನ್ನು ತೆಗೆದುಕೊಳ್ಳಬಾರದು ಏಕೆಂದರೆ ಪಂಚತತ್ವಗಳು ತಮೋಪ್ರಧಾನವಾಗಿದೆ. ಈಗ ನಾನು ನೀವೂ ಮಕ್ಕಳನ್ನು ನನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತೇನೆ ನಂತರ ಅಮರಪುರಿಗೆ ಕಳುಹಿಸುತ್ತೇನೆ. ಇದು ಮೃತ್ಯುಲೋಕ, ಕೊಳಕು ಪ್ರಪಂಚವಾಗಿದೆ ಆದ್ದರಿಂದ ಸಂಗಮಯುಗಕ್ಕೆ ನೂರು ವರ್ಷಗಳುಬೇಕು. ಬೇರೆಲ್ಲಾ ಯುಗಗಳು 1250 ವರ್ಷಗಳಿರುತ್ತವೆ. ಈ ಅಂತಿಮದ ಸಂಗಮಯುಗದ ಆಯಸ್ಸು ಬಹಳ ಚಿಕ್ಕದಾಗಿದೆ. ಹೇಗೆ ಬ್ರಾಹ್ಮಣರ ಜುಟ್ಟು ಚಿಕ್ಕದಾಗಿದೆಯೋ ಹಾಗೆಯೇ ಸಂಗಮಯುಗದ ಆಯಸ್ಸು ಚಿಕ್ಕದಾಗಿದೆ ನಂತರ ಈ ಪ್ರಪಂಚವು ವಿನಾಶವಾಗುತ್ತದೆ. ಆಗ ಹೊಸ ಮನೆ ಮುಂತಾದವುಗಳನ್ನು ಕಟ್ಟಲು ಪ್ರಾರಂಭ ಮಾಡುತ್ತಾರೆ ಅದರಲ್ಲಿ ಮೊದಲು ಶ್ರೀ ಕೃಷ್ಣನು ಬರುತ್ತಾನೆ. ಅಲ್ಲಿ ಮಹಲ್ ಮುಂತಾದವುಗಳನ್ನು ಕಟ್ಟಲು ಆಸೆಯಿರುತ್ತದೆ. ಕೆಲವರಿಗೆ ಅಮರನಾಥನ ಮಂದಿರವನ್ನು ಮಾಡವ ಆಸೆಯಿತ್ತು. ಬಿರ್ಲಾನೂ ಸಹ ಆಸಕ್ತಿಯಿಂದ ಎಷ್ಟೊಂದು ಒಳ್ಳೆಯ ಮಂದಿರವನ್ನು ಕಟ್ಟಿಸಿದ್ದಾನೆ! ನಂಬರ್ವನ್ ಪೂಜ್ಯ ಶಿವಬಾಬಾ ಆಗಿದ್ದಾರೆ. ನಂತರ ಭಕ್ತಿ ಮಾರ್ಗದಲ್ಲಿಯೂ ಸೋಮನಾಥನ ಮಂದಿರವಾಗುತ್ತದೆ ಅದೂ ಸಹ ಸ್ವಲ್ಪ ಸಮಯದ ನಂತರ ಆಗುತ್ತದೆ. ನಂತರ ಭಕ್ತಿಯು ಘೋರ ಅಂದಕಾರವಾಗಿದೆ, ರಾತ್ರಿಯೂ ಪೂರ್ಣವಾಗಿ ನಂತರ ಹಗಲು ಬರುತ್ತದೆ.

ನಾನು ರಾತ್ರಿ ಮತ್ತು ಹಗಲಿನ ಮಧ್ಯೆದಲ್ಲಿ ಬರುತ್ತೇನೆ ಎಂದು ತಂದೆ ಹೇಳುತ್ತಾರೆ. ಮಹಾಭಾರತದ ಯುದ್ಧವೂ ಸಹ ಇದೆ ಅದರಲ್ಲಿ ಬರೆಯಲಾಗಿದೆ- ಅವರ ಹೊಟ್ಟೆಯಿಂದ ಅಂತಹ ವಸ್ತುಗಳು ಬಂದವು ಅದು ಇಡೀ ಕುಲದ ವಿನಾಶವನ್ನು ಮಾಡಿದೆ. ಅವಶ್ಯವಾಗಿ ವಿನಾಶಕ್ಕೋಸ್ಕರ ತಯಾರಿಗಳು ನಡೆಯುತ್ತಿದೆ ಎಂದು ನೀವೂ ನೋಡುತ್ತಿದ್ದೀರಿ ಆದರೆ ಯಾರಾದರೂ ಪ್ರೇರಕರಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಇಬ್ಬರು ಸಹ ವಿನಾಶಕ್ಕೋಸ್ಕರ ಬಾಂಬುಗಳನ್ನು ತಯಾರಿ ಮಾಡಿ ಇಟ್ಟುಕೊಳ್ಳುತ್ತಾರೆ. ಅಪಾಯಗಳು ಸಹ ಬರಲೆಬೇಕು. ನೀವೀಗ ಪ್ರತ್ಯಕ್ಷವಾಗಿ ನೋಡುತ್ತಿದ್ದೀರಿ ಸ್ಥಾಪನೆಯೂ ಸಹ ಆಗುತ್ತದೆ. ವಿನಾಶವು ಎದುರಿಗೆ ನಿಂತಿದೆ. ತಿಳಿದುಕೊಳ್ಳಿ- ಕೆಲವರು ವಿನಾಶವನ್ನು ನೋಡಿಲ್ಲ ಆದರೆ ವೈಕುಂಠವನ್ನು ನೋಡುತ್ತೀರಲ್ಲವೆ. ಚೆನ್ನಾಗಿ ವಿದ್ಯೆಯನ್ನು ಓದಿ ತಂದೆಯಿಂದ ಸಂಪೂರ್ಣ ಬೇಹದ್ದಿನ ಆಸ್ತಿಯನ್ನು ತೆಗೆದುಕೊಳ್ಳಬೇಕು. ನಿಮಗೆ ಸಾಕಾರ ತಂದೆಯೂ ವಿದ್ಯೆಯನ್ನು ಓದಿಸುತ್ತಿಲ್ಲ. ಶಾಸ್ತ್ರಗಳೂ ಇತ್ಯಾದಿಗಳ ಮಾತಿಲ್ಲ. ಇಲ್ಲಿ ಜ್ಞಾನಸಾಗರ ತಂದೆಯೂ ಸ್ವಯಂ ಓದಿಸುತ್ತಾರೆ. ನೀವು ತಮ್ಮನ್ನು ದೇಹಿ ಎಂದು ತಿಳಿದು ತಂದೆಯನ್ನು ನೆನಪು ಮಾಡಿ. ಭಗವಾನಉವಾಚ ತನ್ನ ಮಕ್ಕಳ ಪ್ರತಿ ಹೇಳುತ್ತಾರೆ. ನಾನು ನೀವೂ ಮಕ್ಕಳ ಸಮ್ಮುಖದಲ್ಲಿದ್ದೇನೆ. ಯಾರು ನನ್ನ ಮಕ್ಕಳಾಗಿದ್ದಾರೆಯೋ ಅವರಲ್ಲಿ ಕೆಲವರು ಸುಪುತ್ರ ಮಕ್ಕಳಾಗಿದ್ದಾರೆ, ಕೆಲವರು ಮಲತಾಯಿ ಮಕ್ಕಳಾಗಿದ್ದಾರೆ. ಸುಪುತ್ರ ಮಕ್ಕಳಿಗೆ ಆಸ್ತಿಯ ಅಧಿಕಾರವಿದೆ. ಸಂಶಯ ಬುದ್ಧಿಯವರಿಗೆ ಮಲಮಕ್ಕಳು ಎಂದು ಹೇಳಲಾಗುತ್ತದೆ. ಅವರಿಗೆ ಆಸ್ತಿಯೂ ಸಿಗುವುದಿಲ್ಲ. ಅವರು ಪುರುಷಾರ್ಥದ ಅನುಸಾರ ಪ್ರಜೆಗಳಲ್ಲಿ ಹೋಗುತ್ತಾರೆ. ಸ್ವಂತ ಮಕ್ಕಳು ರಾಜ್ಯಭಾರದಲ್ಲಿ ಬರುತ್ತಾರೆ. ಅವರು ತಂದೆಗೆ ಪ್ರಿಯರಾಗಿರುತ್ತಾರೆ ತಂದೆಯು ಅವರನ್ನು ಪ್ರೀತಿ ಮಾಡುತ್ತಾರೆ. ನಿಮ್ಮ ಮೇಲೆ ಬಲಿಯಾರಿಯಾಗುತ್ತೇನೆ ಎಂದು ಗಾಯನ ಮಾಡುತ್ತಾರಲ್ಲವೆ. ನನ್ನೊಬ್ಬನನ್ನೇ ನೆನಪು ಮಾಡಿದಾಗ ನಾನು ನಿಮಗೆ ಸಹಯೋಗವನ್ನು ಕೊಡುತ್ತೇನೆಂದು ತಂದೆಯು ನಿಮಗೆ ಹೇಳುತ್ತಾರೆ. ಧೈರ್ಯವಂತ ಮಕ್ಕಳಿಗೆ ಭಗವಂತ ಸಹಯೋಗ ಕೊಡುತ್ತಾರೆ ಮತ್ತು ಎಲ್ಲದರಿಂದ ಬುದ್ಧಿಯೋಗವನ್ನು ತೆಗೆದು ಒಬ್ಬರ ಜೊತೆ ಜೋಡಿಸಬೇಕು. ನಾವು ತಂದೆಗೆ ಮಕ್ಕಳಾಗಿದ್ದೇವೆ ಎಂದು ಹೇಳುತ್ತೀರಿ ಇದೆಲ್ಲವೂ ತಂದೆಯದಾಗಿದೆ. ನಾವು ತಂದೆಗೆ ಹಳೆಯದನ್ನು ಕೊಡುತ್ತೇವೆ ಅದಕ್ಕೆ ಬದಲಾಗಿ ಸ್ವರ್ಗದ ಬೇಹದ್ದಿನ ರಾಜ್ಯಪದವಿಯ ಆಸ್ತಿಯನ್ನು ತೆಗೆದುಕೊಳ್ಳುತ್ತೇವೆ. ಈ ಹಳೆಯ ದೇಹದಿಂದ ನಮ್ಮ ಮಮತೆಯನ್ನು ತೆಗೆದುಹಾಕಬೇಕು ಏಕೆಂದರೆ ಇದು ತಮೋಪ್ರಧಾನ, ರೋಗಿ ಶರೀರವಾಗಿದೆ, ನಮ್ಮ ಬಳಿ ಇನ್ನೇನಿದೆ? ಮನುಷ್ಯರು ಸತ್ತರೆ ಎಲ್ಲವನ್ನೂ ಬಿಟ್ಟುಬಿಡುತ್ತಾರೆ. ನಂತರ ಅದೆಲ್ಲವನ್ನೂ ಸ್ಮಶಾನವಾಸಿಗೆ ಕೊಡುತ್ತಾರೆ. ನಾವು ಎಲ್ಲವನ್ನು ನಿಮಗೆ ಕೊಡುತ್ತೇವೆ. ಮಮತೆಯನ್ನು ತೆಗೆದುಹಾಕುವುದಕ್ಕೋಸ್ಕರ ನಾವು ನಿರಂತರ ತಂದೆಯ ನೆನಪನ್ನು ಮಾಡುವ ಪುರುಷಾರ್ಥವನ್ನು ಮಾಡುತ್ತೇವೆ. ಮಾಯೆಯು ನಂತರ ವಿಘ್ನವನ್ನು ಹಾಕುತ್ತದೆ ಆದ್ದರಿಂದ ನಿಧಾನ-ನಿಧಾನವಾಗಿ ಎಷ್ಟು ಸಮಯ ನೆನಪು ಮಾಡುವುದಕ್ಕೆ ತೆಗೆಯುತ್ತೀರೋ ಅಷ್ಟು ವಿಕರ್ಮ ವಿನಾಶವಾಗುತ್ತದೆ, ಅವರೇ ನನ್ನ ಕೊರಳಿನ ಮಾಲೆಯಾಗುತ್ತಾರೆ. ಎಷ್ಟೊಂದು ಸಹಜವಾಗಿ ತಿಳಿಸುತ್ತಿದ್ದಾರೆ. ಈ ರಥವೂ ಸಹ ನಾಟಕದನುಸಾರ ನಿಗಧಿಯಾಗಿದೆ ಎಂದು ತಂದೆಯು ತಿಳಿಸುತ್ತಾರೆ. ನಾನು ಯಾರಲ್ಲೂ ಬರಲು ಸಾಧ್ಯವಿಲ್ಲ.

ನೀವೂ ಹೇಳುತ್ತೀರಿ - ಬಾಬಾ, ಕಲ್ಪದ ಮೊದಲೂ ನಾವು ನಿಮ್ಮಿಂದ ಈ ಮನೆಯಲ್ಲಿ ಈ ಉಡುಪಿನಲ್ಲಿ ಮಿಲನ ಮಾಡಿದ್ದೆವು ಮತ್ತು ತಮ್ಮಿಂದ ಆಸ್ತಿಯನ್ನು ತೆಗೆದುಕೊಂಡಿದ್ದೆವು ಅಂದಾಗ ಎಷ್ಟೊಂದು ಸಹಜವಾಗಿದೆ.

ನನ್ನೊಬ್ಬನನ್ನು ನೆನಪು ಮಾಡಿ ಮತ್ತೆ ಬೇರೆಯಾವುದೇಕಡೆ ಬುದ್ಧಿಹೋಗದಿರಲಿ.ನೆನಪಿಟ್ಟುಕೊಳ್ಳಿ-ಅಂತ್ಯಸಮಯದಲ್ಲಿ ಯಾರು ಪುತ್ರರನ್ನು ಸ್ಮರಣೆ ಮಾಡುತ್ತಾರೆ... ಒಂದುವೇಳೆ ಬೇರೆಯಾರನ್ನೇ ನೆನಪು ಮಾಡಿದರೆ ಅವರು ಅಲ್ಲಿಯೇ ಜನ್ಮವನ್ನು ಪಡೆಯಬೇಕಾಗುತ್ತದೆ ಎಂದು. ಆದ್ದರಿಂದ ಬೇರೆಯಲ್ಲಿಯೂ ಮಮತೆಯನ್ನಿಡಬಾರದು. ಅಂತಿಮಕಾಲದಲ್ಲಿ ಯಾರು ಸ್ತ್ರೀಯನ್ನು ಸ್ಮರಿಸುತ್ತಾರೆಯೋ............ ಪತಿತರನ್ನು ಪಾವನಮಾಡಲು ತಂದೆಯು ಬರುತ್ತಾರೆ. ಅವರ ಮಹಿಮೆಯನ್ನು ಎಷ್ಟೊಂದು ಮಾಡುತ್ತಾರೆ. ಏಕ್ ಓಂಕಾರ್... ಅವರದು ಒಂದೇ ಹೆಸರಾಗಿದೆ. ಅವರು ಬೇರೆ ಯಾರ ಶರೀರವನ್ನೂ ತೆಗೆದುಕೊಳ್ಳುವುದಿಲ್ಲ ಹೆಸರೂ ಬದಲಾಗುವುದಿಲ್ಲ. ನೀವು 84 ಜನ್ಮಗಳನ್ನು ತೆಗೆದುಕೊಳ್ಳುತ್ತೀರೋ ಆಗ 84 ಹೆಸರುಗಳು ಬರುತ್ತವೆ. ತಂದೆಯ ಮಹಿಮೆಯಲ್ಲಿ ಗಾಯನ ಮಾಡುತ್ತಾರೆ - ನಿರ್ಭಯ, ನಿರ್ವೈರ, ಅಕಾಲಮೂರ್ತ....... ಅವರೇ ಕಾಲರಕಾಲ ಆಗಿದ್ದಾರೆ. ಅವರಿಗೆ ಮೃತ್ಯು ಬರುವುದಿಲ್ಲ. ನಾನು ಎಲ್ಲರನ್ನೂ ಮುಕ್ತಿಧಾಮದಲ್ಲಿ ಕರೆದುಕೊಂಡು ಹೋಗುತ್ತೇನೆ. ನಿರ್ವೈರ ಎಂದರೆ ನನಗೆ ಯಾರ ಜೊತೆ ವೈರತ್ವವಿಲ್ಲ. ಅಕಾಲಮೂರ್ತಿ, ಅಯೋನಿಜ ನಾನು ಜನನ-ಮರಣದಲ್ಲಿ ಬರುವುದಿಲ್ಲ. ಅವರದು ಎಷ್ಟೊಂದು ಮಹಿಮೆಯ ಗಾಯನ ಮಾಡುತ್ತಾರೆ. ಗಾಯನವೂ ಇದೆಯಲ್ಲವೆ - ದುಃಖಹರ್ತ-ಸುಖಕರ್ತ....... ಕಲಿಯುಗದ ದುಃಖವನ್ನು ದೂರ ಮಾಡುತ್ತಾರೆ. ಸತ್ಯಯುಗದಲ್ಲಿ ಸುಖಕೊಡುತ್ತಾರೆ. ಭಾರತದ ಸತ್ಯಯುಗದಲ್ಲಿ ಜೀವನ್ಮುಕ್ತಿಯಿತ್ತು ಬಾಕಿ ಎಲ್ಲಾ ಅತ್ಮಗಳು ಶಾಂತಿಧಾಮದಲ್ಲಿದ್ದರು ನೆನಪಿಗೆ ಬರುತ್ತಿತ್ತು ಅಂದಾಗ ಅವಶ್ಯವಾಗಿ ತಂದೆಯು ಯಾವಾಗ ಸಂಗಮಯುಗದಲ್ಲಿ ಬರುತ್ತಾರೆಯೋ ಆಗ ಎಲ್ಲರನ್ನು ಶಾಂತಿಧಾಮಕ್ಕೆ ಕರೆದುಕೊಂಡು ಹೋಗುತ್ತಾರೆ ನಂತರ ನಿಮ್ಮನ್ನು ಸುಖಧಾಮಕ್ಕೆ ಕಳುಹಿಸುತ್ತಾರೆ ಎಷ್ಟೊಂದು ಸಹಜವಾದ ಮಾತಾಗಿದೆ. ಆದರೆ ಇಲ್ಲಿಂದ ಹೊರಗೆ ಹೋದರೆ ಅವರು ಮರೆತುಬಿಡುತ್ತಾರೆ. ಅಷ್ಟು ಮಾಯೆಯು ಪ್ರಬಲವಾಗಿದೆ. ಹೇಗೆ ಗರ್ಭ ಜೈಲಿನಲ್ಲಿ ಧರ್ಮರಾಜನ ಮೂಲಕ ನಿಮಗೆ ಶಿಕ್ಷೆಯನ್ನು ಕೊಡಿಸುತ್ತಾರೆ. ನಾವು ಕ್ಷಮೆಯಾಚಿಸುತ್ತೇವೆ, ಈ ರೀತಿ ಮಾಡುವುದಿಲ್ಲವೆಂದು ಅಯ್ಯೋ, ಅಯ್ಯೋ ಎಂದು ಹೇಳುತ್ತೀರಿ. ಹೊರಗೆ ಬಂದ ನಂತರ ಪುನಃ ಪಾಪವನ್ನು ಮಾಡಲು ತೊಡಗುತ್ತೀರಿ ಇದು ಮಾಯೆಯ ರಾಜ್ಯವಾಗಿದೆ. ಸತ್ಯ-ತ್ರೇತಯುಗದಲ್ಲಿ ಮಾಯೆಯು ಇರುವುದಿಲ್ಲ. ಅಲ್ಲಿ ಸುಖವೆ ಸುಖವಿರುತ್ತದೆ. ಈಗ ನೀವು ವಿದ್ಯೆಯನ್ನು ಓದುತ್ತಿದ್ದೀರಿ ಇದರಲ್ಲಿ ಮನೆ-ಮಠವನ್ನು ಬಿಡುವ ಮಾತಿಲ್ಲ. ದೇಹಸಹಿತ ಎಲ್ಲವನ್ನೂ ಮರೆಯಿರಿ ಎಂದು ತಂದೆಯು ಹೇಳುತ್ತಾರೆ. ನಿಮ್ಮದು ಇದು ಬೇಹದ್ದಿನ ಸನ್ಯಾಸವಾಗಿದೆ. ಆ ಸನ್ಯಾಸಿಗಳದ್ದು ಹದ್ದಿನ ಸನ್ಯಾಸವಾಗಿದೆ. ಕಾಡಿಗೆ ಹೋಗಿ ನಂತರ ಊರಿಗೆ ಹಿಂದಿರುಗುತ್ತಾರೆ. ಹೆಸರನ್ನು ಸಹ ಬಹಳ ದೊಡ್ಡದಾಗಿ ಇಟ್ಟುಕೊಳ್ಳುತ್ತಾರೆ. ನಾನು ಎಷ್ಟೊಂದು ಸಹಜವಾಗಿ ತಿಳಿಸುತ್ತೇನೆಂದು ತಂದೆಯು ಹೇಳುತ್ತಾರೆ. ವೃದ್ಧರೂ ಸಹ ಎಷ್ಟೊಂದು ಮಂದಿ ಇದ್ದಾರೆ - ನಮಗೆ ಧಾರಣೆಯಾಗುವುದಿಲ್ಲವೆಂದು ಹೇಳುತ್ತಾರೆ. ಒಳ್ಳೆಯದು ತಂದೆಯು ನಿಮ್ಮಗೆ ಓದಿಸುತ್ತಾರೆಂದು ನಿಮಗೆ ತಿಳಿದಿದೆ. ಅವರು ಕೇವಲ ನನ್ನೊಬ್ಬನನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ಇದರಲ್ಲಿ ಏನೂ ತೊಂದರೆಯಿಲ್ಲ. ಈಗ ನಾನು 84 ಜನ್ಮಗಳನ್ನು ಪೂರ್ಣ ಮಾಡಿದೆ, ಇದು ಸ್ವದರ್ಶನಚಕ್ರವಾಗಿದೆ ಆತ್ಮಕ್ಕೆ ಚಕ್ರದ ದರ್ಶನವಾಗುತ್ತದೆ. ಇಲ್ಲಿ ನಿರೋಗಿಕಾಯವಾಗುತ್ತದೆ. ಚಕ್ರವನ್ನು ತಿಳಿದುಕೊಳ್ಳುವುದರಿಂದ ನೀವು ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುತ್ತೀರಿ ಆದ್ದರಿಂದ ಸ್ವದರ್ಶನಚಕ್ರಧಾರಿಯಾಗಿ ಎಂದು ತಂದೆಯು ಹೇಳುತ್ತಾರೆ. ಎಷ್ಟೊಂದು ಸಹಜವಾಗಿ ತಿಳಿಸುತ್ತಾರೆ! ಸಹಜ ನೆನಪು, ಸಹಜವಾದ ಸೃಷ್ಟಿಚಕ್ರ, ಯಾವುದೆ ತೊಂದರೆಯಿಲ್ಲ. ಇದು ಸತ್ಯಸಂಪಾದನೆಯಾಗಿದೆ ಬಾಕಿ ಹಣ, ಸಂಪತ್ತೆಲ್ಲವೂ ವಿನಾಶವಾಗುತ್ತದೆ. ಎಲ್ಲವೂ ದೂರವಾಗುತ್ತದೆ. ಸಾಗರದಲ್ಲಿ ಪ್ರವಾಹವು ಬರುತ್ತದೆ ಸ್ವಾಭಾವಿಕ ಪ್ರಕೃತಿ ವಿಕೋಪಗಳು ಬರುತ್ತವೆ. ಭಾರತ ಸತ್ಯಖಂಡವಾಗಿತ್ತು ಬೇರೆ ಯಾವುದೇ ಖಂಡವಿರಲಿಲ್ಲ. ಭಾರತ ಶಿವತಂದೆಯ ಜನ್ಮಭೂಮಿಯಾಗಿದೆ, ಅತೀ ದೊಡ್ಡ ತೀರ್ಥಸ್ಥಾನವಾಗಿದೆ. ಭಾರತದಲ್ಲಿ ಸೋಮನಾಥನ ಮಂದಿರ ಎಷ್ಟು ಚೆನ್ನಾಗಿ ಮಾಡಿದ್ದಾರೆ! ಈಗ ಅನೇಕ ಮಂದಿರಗಳನ್ನು ಮಾಡುತ್ತಿದ್ದಾರೆ.

ತಂದೆಯು ಹೇಳುತ್ತಾರೆ - ಈ ಸಮಯದ ಮದುವೆ ಸಂಪೂರ್ಣ ಹಾಳಾಗುತ್ತಾರೆ. ಶಿವತಂದೆಯ ಜೊತೆ ನಿಶ್ಚಿತಾರ್ಥವು ಪೂರ್ಣ ಒಳ್ಳೆಯದಾಗುತ್ತದೆ. ಪ್ರಿಯತಮ ಶಿವತಂದೆಯಾಗಿದ್ದಾರೆ ಸ್ವರ್ಗಕ್ಕೆ ಕಳುಹಿಸುತ್ತಾರೆ. ನೀವಿಲ್ಲಿ ಬಂದಿದ್ದೀರಿ. ನಾವು ಇಲ್ಲಿಯೇ ಅವಶ್ಯವಾಗಿ ನರನಿಂದ ನಾರಾಯಣ, ನಾರಿಯಿಂದ ಲಕ್ಷ್ಮೀಯಾಗುತ್ತೇವೆ ಎಂದು ತಿಳಿದುಕೊಂಡಿದ್ದೀರಿ. ಪುರುಷರು ಹೋಗಿ ಪುರುಷರೇ ಆಗುತ್ತಾರೆಂದಲ್ಲ. ಬದಲಾವಣೆಯಾಗುತ್ತದೆ. ಕೆಲವರು ಪುರುಷರ ಶರೀರವನ್ನು ಕೆಲವರು ಸ್ತ್ರೀಯರ ಶರೀರವನ್ನು ಧಾರಣೆ ಮಾಡುತ್ತಾರೆ ನಂತರ ಸತ್ಯಯುಗದಿಂದ ತ್ರೇತಾಯುಗ ಹೇಗಾಗುವುದೆಂದು ನಿಮಗೆ ತಿಳಿಸಲಾಗಿದೆ. ಈಗ ನೀವು ಮಕ್ಕಳಿಗೆ ಜ್ಞಾನಪೂರ್ಣ ಗಾಡ್ ಫಾದರ್ ವಿದ್ಯೆಯನ್ನು ಓದಿಸುತ್ತಿದ್ದಾರೆ. ಮನುಷ್ಯರು ತಂದೆ, ಶಿಕ್ಷಕ, ಸದ್ಗುರು ಆಗಲು ಸಾಧ್ಯವಿಲ್ಲ. ತಂದೆ ಶಿಕ್ಷಕರಾಗುತ್ತಾರೆ ಆದರೆ ಗುರುವಾಗಲು ಸಾಧ್ಯವಿಲ್ಲ. ಆದರೂ ಸಹ ಅದು ಶಾರೀರಕವಾದ ವಿದ್ಯೆಯಾಗಿದೆ. ಈ ತಂದೆಯು ಒಂದೇ ಬಾರಿ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಯಾವುದಾದರೂ ಮಾತು ತಿಳಿದುಕೊಳ್ಳದಿದ್ದರೆ ಸಾವಿರ ಬಾರಿ ಹೇಳಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ

ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸುಪುತ್ರ ಆಜ್ಞಾಕಾರಿಗಳಾಗಿ ವಿಜಯಮಾಲೆಯ ಮಣಿಗಳಾಗಬೇಕಾಗಿದೆ. ತಂದೆಗೆ ತಮ್ಮ ಕೆಟ್ಟ ಗುಣಗಳನ್ನು ಕೊಟ್ಟು, ಬಲಿಹಾರಿಗಳಾಗಿ ಎಲ್ಲದರಿಂದ ಮಮತೆಯನು ತೆಗೆದುಹಾಕಿ.

2. ಅಂತಿಮ ಸಮಯದಲ್ಲಿ ಒಬ್ಬ ತಂದೆಯ ನೆನಪಿರಲಿ ಅದಕ್ಕೋಸ್ಕರ ಎಲ್ಲದರಿಂದ ಯೋಗವನ್ನು ತೆಗೆದುಹಾಕಿ ನಿರಂತರ ತಂದೆಯ ನೆನಪಿನಲ್ಲಿರುವಂತಹ ಪುರುಷಾರ್ಥ ಮಾಡಬೇಕು.

ವರದಾನ: ಸರ್ವ ಖಜಾನೆಗಳನ್ನು ಸ್ವಯಂನಲ್ಲಿ ಅಳವಡಿಸಿಕೊಂಡು, ಹೃದಯ ವಿಧೀರ್ಣತನ ಅಥವಾ ಈರ್ಷೆಯಿಂದ ಮುಕ್ತರಾಗಿರುವಂತಹ ಸದಾ ಪ್ರಸನ್ನಚಿತ್ತ ಆತ್ಮ ಭವ.

ಬಾಪ್ದಾದಾರವರು ಎಲ್ಲಾ ಮಕ್ಕಳಿಗೂ ಸಮಾನ ರೂಪದಿಂದ ಎಲ್ಲಾ ಖಜಾನೆಗಳನ್ನೂ ಕೊಟ್ಟಿದ್ದಾರೆ. ಆದರೆ ಕೆಲವರು ಆ ಪ್ರಾಪ್ತಿಗಳನ್ನು ಸ್ವಯಂನಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಅಥವಾ ಸಮಯದಲ್ಲಿ ಕಾರ್ಯದಲ್ಲಿ ತೊಡಗಿಸಲು ಬರುವುದಿಲ್ಲ. ಆದ್ದರಿಂದ ಸಫಲತೆ ಕಂಡುಬರುವುದಿಲ್ಲ. ಅದಕ್ಕಾಗಿ ಸ್ವಯಂ ಹೃದಯ ವಿಧೀರ್ಣರಾಗಿ ಬಿಡುತ್ತಾರೆ, ಮತ್ತು ಯೋಚಿಸುತ್ತಾರೆ ನನ್ನ ಭಾಗ್ಯದಲ್ಲಿರುವುದೇ ಇಷ್ಟು ಎಂದು. ನಂತರ ಅವರಿಗೆ ಅನ್ಯರ ಭಾಗ್ಯವನ್ನು ನೋಡಿ ಈರ್ಷೆ ಉತ್ಪನ್ನವಾಗುವುದು. ಈ ರೀತಿಯ ಹೃದಯ ವಿಧೀರ್ಣತೆ ಅಥವಾ ಈರ್ಷೆ ಪಡುವಂತಹವರು ಎಂದೂ ಪ್ರಸನ್ನರಾಗಿರಲು ಸಾಧ್ಯವಿಲ್ಲ. ಸದಾ ಪ್ರಸನ್ನರಾಗಿರಬೇಕಾದರೆ ಈ ಎರಡೂ ಮಾತುಗಳಿಂದ ಮುಕ್ತರಾಗಿ.

ಸ್ಲೋಗನ್: ಸ್ವಾರ್ಥ ರಹಿತವಾಗಿ ಸತ್ಯ ಹೃದಯದಿಂದ ಸೇವೆ ಮಾಡುವವರೇ ಸ್ವಚ್ಚ ಆತ್ಮಗಳಾಗಿರುವರು.